# ನಂದಿಗೆ ಸನಿಹದಲ್ಲಿ ಹೈದರ್ ಅಲಿ ಬೆಟ್ಟ

**ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಂದಿ ಬೆಟ್ಟ ಸೇರಿದಂತೆ ಐದು ಪ್ರಸಿದ್ಧ ಬೆಟ್ಟಗಳಿವೆ. ಈ ಪಂಚಕಳಸ ಗೋಪುರಗಳ ಮರೆಯಲ್ಲಿರುವಂತೆ ಕಾಣಿಸುವ 'ಹೈದರ್ ಅಲಿ ಬೆಟ್ಟ' ಗಾತ್ರದಲ್ಲಿ ಪುಟ್ಟದಾದರೂ, ಅದರ ಚರಿತ್ರೆಯೇನೂ ಕಡಿಮೆಯಾದುದಲ್ಲ. ಹೈದರ್–ಟಿಪ್ಪು ಸುಲ್ತಾನನ ಕಾಲದ ರಕ್ತಸಿಕ್ತ ಚರಿತ್ರೆಯ ಕಥನಗಳನ್ನು ಬೆಟ್ಟ ತಳಕು ಹಾಕಿಕೊಂಡಿದೆ.**

**■ ಡಿ.ಜಿ. ಮಲ್ಲಿಕಾರ್ಜುನ**



ಜೇಮ್ಸ್ ವೆಲ್ಷ್ ಅವರ 'ಮಿಲಿಟರಿ ರೆಮಿನೆಸನ್ಸಸ್' ಕೃತಿ ನಂದಿ ಬೆಟ್ಟದ ಇತಿಹಾಸದ ಬಗ್ಗೆ ಸಾಕಷ್ಟು ವಿವರಗಳನ್ನು ನೀಡುತ್ತದೆ. ಜೇಮ್ಸ್ ಅವರು, ಈಸ್ಟ್ ಇಂಡಿಯಾ ಕಂಪನಿಯ ಮದ್ರಾಸ್ ಆರ್ಮಿಯಲ್ಲಿ ಜನರಲ್ ಆಗಿದ್ದವರು (1790–1848). ತಮ್ಮ 40 ವರ್ಷಗಳ ಮಿಲಿಟರಿ ಸೇವೆಯ ಅನುಭವಗಳನ್ನು ವೆಲ್ಷ್ 'ಮಿಲಿಟರಿ ರೆಮಿನೆಸನ್ಸಸ್' ಕೃತಿಯಲ್ಲಿ ದಾಖಲಿಸಿದ್ದಾರೆ.

ಜೇಮ್ಸ್‌ರ ಪುಸ್ತಕದಲ್ಲಿ ನನ್ನನ್ನು ಆಕರ್ಷಿಸಿದ್ದು, 'ಹೈದರನ ಡ್ರಾಪ್' ಎನ್ನುವ ಅಧ್ಯಾಯ. ಪ್ರಖ್ಯಾತ ನಂದಿ ದೇವಾಲಯದ ಹತ್ತಿರದಲ್ಲಿಯೇ ಇರುವ ಹೈದರ್ ಅಲಿ ಬೆಟ್ಟದ ಬಗ್ಗೆ ಇರುವ ಈ ಅಧ್ಯಾಯವನ್ನು ಓದಿದೊಡನೆಯೇ, ಆ ಬೆಟ್ಟವನ್ನು ಒಮ್ಮೆ ನೋಡಿ ಬರಬೇಕೆನಿಸಿತು. ಯಲುವಳ್ಳಿ ಮಂಜು ಅವರ ಜೊತೆಗೂಡಿ, ನಂದಿ ಗ್ರಾಮದಲ್ಲಿ ದೇವಸ್ಥಾನದ ಹಿಂಬದಿಯಿಂದ ಸುಲ್ತಾನ್ ಪೇಟೆ ಕಡೆ ಹೊರಟು, ಬಲಭಾಗದಲ್ಲಿ ಸಿಗುವ ಸಿಂಗಾಟಕದಿರೇನಹಳ್ಳಿ ಗ್ರಾಮವನ್ನು ತಲುಪಿದೆ.

'ಚಿಕ್ಕಬಳ್ಳಾಪುರ ಜಿಲ್ಲೆಯು ಹಲವು ಹೆಸರಾಂತ ಗುಡ್ಡಬೆಟ್ಟಗಳ ತವರೂರು. ಪ್ರಸಿದ್ಧ ನಂದಿಬೆಟ್ಟ ಸೇರಿದಂತೆ ಇಲ್ಲಿ ಪಂಚಗಿರಿಗಳು ಇವೆ. ಅವು ನಂದಿಗಿರಿ. ಸ್ಕಂದಗಿರಿ, ಬ್ರಹ್ಮಗಿರಿ, ಚೆನ್ನಗಿರಿ ಮತ್ತು ದಿವ್ಯಗಿರಿ. ಇವೆಲ್ಲವನ್ನೂ ಬಿಟ್ಟು ಈ ಚಿಕ್ಕ ಬೆಟ್ಟದ ಬಗ್ಗೆ ಏಕೆ ಇಷ್ಟು ಆಸಕ್ತಿ?' ಎಂದರು ಮಂಜು. ಅವರ ಮಾತಿಗೆ ನಕ್ಕು ಮುಂದೆ ನಡೆದೆ.

ಗಾಟಕದಿರೇನಹಳ್ಳಿ ಗ್ರಾಮವು ಹೈದರ್ ಅಲಿ ಬೆಟ್ಟದ ಬುಡದಲ್ಲೇ ಇದೆ. ಗ್ರಾಮವನ್ನು ಆನಿಕೊಂಡಂತಿರುವ ಬೆಟ್ಟವನ್ನು ಏರಲು ಸೂಕ್ತ ಮಾರ್ಗವಿಲ್ಲ. ಕಾಲುದಾರಿಯೂ ಇಲ್ಲ. ಗಿಡಗಂಟೆಗಳು, ಕಲ್ಲು ಬಂಡೆಗಳ ನಡುವೆಯೇ ದಾರಿ ಕಂಡುಕೊಳ್ಳುತ್ತ, ಸಣ್ಣ ಪುಟ್ಟ ಬಂಡೆಗಳ ಮೇಲೆ ಹೆಜ್ಜೆಯಿಡುತ್ತಾ ಮುಂದೆ ಸಾಗಿದೆವು.

ಬೆಟ್ಟವನ್ನು ಏರುತ್ತಾ ಸಾಗಿದಂತೆ ಬೃಹತ್ ಬಂಡೆಯ ಮೇಲೆ ನಿರ್ಮಿಸಿರುವ ಕಲಾತ್ಮಕ ಮಂಟಪ ಕಾಣಿಸಿತು. ಆ ಬೆಟ್ಟಕ್ಕೆ ಆ ಮಂಟಪವೇ ಕಲಶಪ್ರಾಯ. ಮಂಟಪದ ಬಂಡೆಯನ್ನು ಏರುವುದು ಸುಲಭವಲ್ಲ. ದೊಡ್ಡದಾದ ಬಂಡೆಯ ತುದಿಯಲ್ಲಿ ಒಂದಷ್ಟು ಕಲ್ಲುಗಳನ್ನು ಪೇರಿಸಿ ಕೋಟೆ ಗೋಡೆಯಂತೆ ನಿರ್ಮಾಣ ಮಾಡಲಾಗಿದೆ. ಮಂಟಪದಲ್ಲಿ ಹಾಗೂ ಸುತ್ತಮುತ್ತ ಕುಳಿತುಕೊಳ್ಳಲು ಒಂದಷ್ಟು ಸ್ಥಳಾವಕಾಶವಿದೆ.

ಮುಂಜಾವಿನ ಸಮಯದಲ್ಲಿ ನಾವು ಬೆಟ್ಟವನ್ನು ಏರಿದ್ದರಿಂದ ಕಾಣಸಿಕ್ಕ ಸುಂದರ ಪ್ರಾಕೃತಿಕ ನೋಟ ಮನಸ್ಸಿಗೆ ಖುಷಿ ನೀಡಿತು. ಮುಂಜಾವಿನ ಬೆಳ್ಳನೆಯ ಮಂಜಿನ ನಡುವೆ ಹೆಜ್ಜೆಯಿಡುತ್ತ ಹುಮ್ಮಸ್ಸಿನಲ್ಲಿ ನಡೆಯತೊಡಗಿದೆವು. ಬೆಟ್ಟದ ಮೇಲಿನ ಮಂಟಪದಿಂದ ಒಂದು ದಿಕ್ಕಿನಲ್ಲಿ ಜೋಡಿ ಬೆಟ್ಟಗಳಾದ ನಂದಿಬೆಟ್ಟ ಹಾಗೂ ಚನ್ನರಾಯನಬೆಟ್ಟ ಕಾಣಿಸಿದರೆ, ಇನ್ನೊಂದು ದಿಕ್ಕಲ್ಲಿ ಕಳವಾರ ಬೆಟ್ಟ ಕಾಣುತ್ತದೆ.

ನಂದಿಬೆಟ್ಟ, ಚನ್ನರಾಯನಬೆಟ್ಟ, ಕಳವಾರಬೆಟ್ಟ ಮುಂತಾದವುಗಳ ನಡುವೆ ಇರುವ ಈ ಪುಟಾಣಿ ಬೆಟ್ಟವು 'ಹೈದರ್ ಅಲಿ ಬೆಟ್ಟ' ಎಂದು ನಾಮಕರಣಗೊಂಡಿರುವುದೇ ಒಂದು ಸೋಜಿಗದ ಸಂಗತಿ. ಇಲ್ಲಿನ ಗ್ರಾಮಸ್ಥರಿಗೆ ಆ ಹೆಸರಿನ ಮೂಲದ ಬಗ್ಗೆ ಗೊತ್ತಿಲ್ಲ. 'ಬಹಳ ಹಿಂದಿನಿಂದಲೂ ಹೀಗೇ ಕರೆಯುತ್ತಾರೆ' ಎನ್ನುತ್ತಾರೆ ಅವರು.

'ಮಿಲಿಟರಿ ರೆಮಿನೆಸನ್ಸಸ್' ಕೃತಿಯಲ್ಲಿ ಬೆಟ್ಟದ ಕುರಿತಾಗಿ ಜೇಮ್ಸ್ ಅವರು ಬರೆದಿರುವುದು ಹೀಗಿದೆ:

"1809ರ ಜೂನ್ 27ರಂದು ನಾವು ನಂದಿದುರ್ಗದ ಕಣಿವೆಯಲ್ಲಿನ ಮನೆಗೆ ಬಂದೆವು. ಧೈರ್ಯಶಾಲಿ ಮೇಜರ್ ಗೌಡಿ 1791ರಲ್ಲಿ ತನ್ನ ಸೇನೆಯೊಂದಿಗೆ ನಂದಿದುರ್ಗದ ಕೋಟೆಯನ್ನು ಭೇದಿಸಿದ್ದ. ಈಗ 1809ರಲ್ಲಿ ಈ ಸ್ಥಳದ ನಿಯಂತ್ರಣ ನನಗೆ ಒಪ್ಪಿಸಿದ್ದಾರೆ.

ಈ ಕಣಿವೆಯಲ್ಲಿ ನಮ್ಮ ಮನೆಯಿಂದ ಸುಮಾರು ಮೈಲಿ ದೂರದಲ್ಲಿ ಒಂದು ಕಲ್ಲಿನ ಬೆಟ್ಟವಿದೆ. ಅದು ಕೆಲವು ನೂರು ಗಜಗಳಷ್ಟು ಎತ್ತರವಿದೆ. ಬೆಟ್ಟದ ಪೂರ್ವ ತುದಿಯಲ್ಲಿ ಲಂಬವಾಗಿ ನಿಂತ ದೊಡ್ಡ ಕಲ್ಲುಬಂಡೆಯಿದೆ. ಅದನ್ನು 'ಹೈದರನ ಡ್ರಾಪ್' ಎಂದೇ ಕರೆಯುವರು. ನೋಡಲು ಸುಂದರವಾಗಿದ್ದರೂ,

